## ನಿವೇದನೆ

# ಕಲಿಕೆಗೆ ಆದ್ಯತೆ ನೀಡಿದರಷ್ಟೇ ಸಾಲದು ಮಕ್ಕಳ ಸುರಕ್ಷತೆಯೂ ಮುಖ್ಯವಾಗಬೇಕು

**ಮೇ 16ರಿಂದ ಶಾಲೆಗಳು ಆರಂಭವಾಗುತ್ತಿವೆ. ಶೈಕ್ಷಣಿಕ ವರ್ಷವನ್ನು ಎರಡು ವಾರಗಳ ಮೊದಲು ಆರಂಭಿಸುತ್ತಿರುವ ಸರ್ಕಾರ – ಮಕ್ಕಳ ಕಲಿಕೆಯ ಪುನಶ್ಚೇತನದ ಜೊತೆಗೆ, ಕೊರೊನಾದ ಸಂಭಾವ್ಯ ನಾಲ್ಕನೇ ಅಲೆ ಹಾಗೂ ಬಿಸಿಲ ಝಳದಿಂದ ಎಳೆಯರನ್ನು ರಕ್ಷಿಸುವ ಸವಾಲನ್ನು ನಿಭಾಯಿಸಬೇಕಾಗಿದೆ.**

ಮಕ್ಕಳ ಕಲಿಕೆಗೆ ಉಲ್ಲಾಸದಾಯಕವಾದ ವಾತಾವರಣವನ್ನು ಕಲ್ಪಿಸಿಕೊಡುವುದು ಆರೋಗ್ಯಕರ ಸಮಾಜವೊಂದರ ಕರ್ತವ್ಯ. ಕೊರೊನಾ ಸೋಂಕಿನ ಆತಂಕದ ಕಾರಣದಿಂದಾಗಿ ಹಿತಕರ ವಾತಾವರಣದ ಮಾತಿರಲಿ, ಮಕ್ಕಳ ಕಲಿಕೆಯ ಅವಕಾಶಗಳೇ ಮೊಟಕಾಗಿವೆ. ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳು ಶಾಲೆಯ ಮುಖ ನೋಡಿದ ಅವಧಿ ತೀರಾ ಕಡಿಮೆ. ಲಾಕ್‌ಡೌನ್ ಅವಧಿಯಲ್ಲಿ ಆನ್‌ಲೈನ್ ಕಲಿಕೆ ಆಶಾಕಿರಣದಂತೆ ಕಾಣಿಸಿದರೂ, ಶಾಲೆಗಳಲ್ಲಿನ ಕಲಿಕೆಗೆ ಅದು ಪರ್ಯಾಯವಲ್ಲ ಎನ್ನುವುದು ಮತ್ತೆ ಮತ್ತೆ ಸಾಬೀತಾಗಿದೆ. ಒಂದು ವರ್ಗದ ವಿದ್ಯಾರ್ಥಿಗಳು ಕಲಿಕೆಯ ನಂಟು ಉಳಿಸಿಕೊಳ್ಳಲು ‘ಡಿಜಿಟಲ್ ಮಾಧ್ಯಮ’ ಅವಕಾಶ ಕಲ್ಪಿಸಿತಾದರೂ, ಶಿಕ್ಷಣ ಕ್ಷೇತ್ರದಲ್ಲಿ ಈಗಾಗಲೇ ಇರುವ ಅಸಮಾನತೆಯನ್ನು ಆನ್‌ಲೈನ್ ಶಿಕ್ಷಣ ಮತ್ತಷ್ಟು ಹೆಚ್ಚಿಸಿದ್ದನ್ನೂ ಗಮನಿಸಬೇಕು.

ಕೊರೊನಾ ಅವಧಿಯಲ್ಲಿ ಮಕ್ಕಳ ಕಲಿಕೆಯ ಮಟ್ಟ ಕುಂಠಿತವಾಗಿರುವ ಹಿನ್ನೆಲೆಯಲ್ಲಿ 2022–23ನೇ ಶೈಕ್ಷಣಿಕ ವರ್ಷದಲ್ಲಿ ಕಲಿಕೆಯ ಪುನಶ್ಚೇತನ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ಸರ್ಕಾರ ಮಾತನಾಡುತ್ತಿದೆ. ಆದರೆ, ಈ ಪುನಶ್ಚೇತನದ ಚಿಂತನೆ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆಂದು ಹೇಳುವುದು ಕಷ್ಟ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯ ಸಮಸ್ಯೆಯನ್ನು ಬಗೆಹರಿಸಲು, 27 ಸಾವಿರ ಅತಿಥಿ ಶಿಕ್ಷಕರನ್ನು ಒಂದು ವರ್ಷದ ಮಟ್ಟಿಗೆ ನೇಮಿಸಿಕೊಳ್ಳಲು ಸರ್ಕಾರ ಮುಂದಾಗಿದೆ. ಶಿಕ್ಷಕರ ಕೊರತೆಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಇಚ್ಛಾಶಕ್ತಿಯನ್ನು ಪ್ರದರ್ಶಿಸದ ಸರ್ಕಾರ, ಸರ್ಕಾರಿ ಶಾಲೆಗಳಲ್ಲಿನ ಕಲಿಕೆಯ ಗುಣಮಟ್ಟ ಹೆಚ್ಚಿಸುತ್ತದೆಂದು ನಿರೀಕ್ಷಿಸುವುದು ಕಷ್ಟ. ವರ್ಷದಿಂದ ವರ್ಷಕ್ಕೆ ಮುಚ್ಚುತ್ತಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಈ ಸಂದಿಗ್ಧ ಕಾಲದಲ್ಲಿ, ಉಳಿದಿರುವ ಶಿಕ್ಷಕರೇ ಹೆಚ್ಚಿನ ಹೊಣೆಗಾರಿಕೆಯನ್ನು ಹೊರುವುದು ಅನಿವಾರ್ಯ. ಮುಂದಿನ ಮೂರ್ನಾಲ್ಕು ವರ್ಷಗಳ ಮಟ್ಟಿಗಾದರೂ ಶಿಕ್ಷಕರಿಗೆ ಅನ್ಯಕಾರ್ಯಗಳನ್ನು ಹೊರಿಸದೆ, ಅವರ ಸಂಪೂರ್ಣ ಸಾಮರ್ಥ್ಯ ಮಕ್ಕಳ ಕಲಿಕೆಗೆ ವಿನಿಯೋಗವಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಖಾಸಗಿ ಶಾಲೆಗಳು ಕೂಡ ಸಮಸ್ಯೆಗಳನ್ನು ಎದುರಿಸುತ್ತಿವೆ. ಲಾಕ್‌ಡೌನ್ ಅವಧಿಯಲ್ಲಿ ಅನೇಕ ಶಿಕ್ಷಕರು ಕೆಲಸ ಕಳೆದುಕೊಂಡರು. ಈಗ ಶಿಕ್ಷಕರ ಕೊರತೆಯನ್ನು ತುಂಬಿಕೊಳ್ಳಲು ಖಾಸಗಿ ಶಾಲೆಗಳು ಹೆಣಗಾಡುತ್ತಿವೆ. ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕದಲ್ಲಿ ಏರುಪೇರಾದುದರಿಂದ ಈ ವರ್ಷ ಒಂದೇ ಕಂತಿನಲ್ಲಿ ಶುಲ್ಕ ಕಟ್ಟುವಂತೆ ಶಾಲಾ ಆಡಳಿತ ಮಂಡಳಿಗಳು ಪೋಷಕರನ್ನು ಒತ್ತಾಯಿಸುತ್ತಿವೆ. ಕೊರೊನಾದ ನಾಲ್ಕನೇ ಅಲೆಯ ಆತಂಕದ ಜೊತೆಗೆ, ಮಕ್ಕಳ ಶಾಲಾಶುಲ್ಕವನ್ನು ಒಮ್ಮೆಗೇ ಭರಿಸುವ ಆರ್ಥಿಕ ಒತ್ತಡವನ್ನೂ ಪೋಷಕರು ಎದುರಿಸಬೇಕಾಗಿದೆ.

ಕೊರೊನಾ ವಲಯದಲ್ಲಿ ದೊಡ್ಡ ಸಂಖ್ಯೆಯ ಮಕ್ಕಳು ಶಾಲೆ ಬಿಟ್ಟು ಪೋಷಕರೊಂದಿಗೆ ದುಡಿಮೆಗೆ ಕೈಜೋಡಿಸಿದ್ದಾರೆ. ಇಂಥ ಮಕ್ಕಳ ಪ್ರಮಾಣ ವಲಸೆ ಕಾರ್ಮಿಕರ ಕುಟುಂಬಗಳಲ್ಲಿ ಮತ್ತಷ್ಟು ಹೆಚ್ಚು. ತರಗತಿಗಳಿಂದ ದೂರವುಳಿದಿರುವ ಮಕ್ಕಳನ್ನು ಗುರ್ತಿಸುವುದು ಹಾಗೂ ಶಾಲೆಗಳಿಗೆ ಅವರನ್ನು ಮರಳಿ ಕರೆತರುವುದು ಶಿಕ್ಷಣ ಇಲಾಖೆಯ ಮುಂದಿರುವ ಬಹುದೊಡ್ಡ ಸವಾಲು.

ಪ್ರಸಕ್ತ ಶೈಕ್ಷಣಿಕ ಋತು ಹದಿನೈದು ದಿನಗಳ ಮೊದಲು, ಅಂದರೆ ಮೇ 16ರಿಂದಲೇ ಆರಂಭವಾಗುತ್ತಿದೆ. ಶಾಲೆಗಳನ್ನು ಬೇಗನೆ ಆರಂಭಿಸುತ್ತಿರುವ ಸರ್ಕಾರ, ಹಲವು ಸವಾಲುಗಳನ್ನೂ ಎದುರಿಸಬೇಕಾಗಿದೆ. ಕೊರೊನಾದ ಸಂಭಾವ್ಯ ನಾಲ್ಕನೇ ಅಲೆಯ ಪರಿಣಾಮ ಮಕ್ಕಳ ಮೇಲಾಗದಂತೆ ನೋಡಿಕೊಳ್ಳಬೇಕಾಗಿರುವುದು ಬಹುದೊಡ್ಡ ಸವಾಲು. ಐದರಿಂದ ಹನ್ನೆರಡು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡುವುದಕ್ಕೆ ಕೇಂದ್ರ ಸರ್ಕಾರ ಹಸಿರು ನಿಶಾನೆ ತೋರಿಸಿದೆ. ಈ ಅವಕಾಶವನ್ನು ಬಳಸಿಕೊಂಡು ಶಾಲಾ ಮಕ್ಕಳನ್ನು ಆದಷ್ಟು ಬೇಗ ಲಸಿಕೆಯ ಸುರಕ್ಷಿತ ವಲಯದೊಳಗೆ ತರಲು ಸರ್ಕಾರ ಮುಂದಾಗಬೇಕು.

ಬಿಸಿಲಿನ ಝಳ ಮಕ್ಕಳನ್ನು ಕಂಗೆಡಿಸಬಹುದಾದ ಮತ್ತೊಂದು ಸಂಗತಿ. ಇಡೀ ದೇಶವೇ ಸುಡು ಬಿಸಿಲಿನ ದವಡೆಗೆ ಸಿಲುಕಿದ್ದು, ಕರ್ನಾಟಕ ಕೂಡ ಬೇಸಿಗೆಯ ತೀವ್ರತೆಗೆ ನಲುಗಿದೆ. ಬೆಂಗಳೂರಿನಲ್ಲಿ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಪ್ರದೇಶಗಳಿಗಂತೂ ಕೆಟ್ಟುನಿಂತಿರುವ ಸೂರ್ಯರಥದಿಂದ ಬಿಡುಗಡೆಯೇ ಇಲ್ಲದಂತಾಗಿದೆ. ಬಿಸಿಲ ಝಳದ ಜೊತೆಗೆ ಪರಿಸರ ಮಾಲಿನ್ಯವೂ ಸೇರಿಕೊಂಡು ಅಸಹನೀಯ ವಾತಾವರಣ ರೂಪುಗೊಂಡಿದೆ. ಈ ಪ್ರತಿಕೂಲ ಪರಿಸ್ಥಿತಿಗೆ ಮೊದಲು ಬಸವಳಿಯುವುದು ಮಕ್ಕಳೇ. ಕೊರೊನಾಕ್ಕಿಂತಲೂ ವಾತಾವರಣದ ಏರುಪೇರುಗಳೇ ಮಕ್ಕಳನ್ನು ಹೆಚ್ಚು ಗಾಸಿಗೊಳಿಸಬಲ್ಲವು. ಹಾಗಾಗಿ ಮಕ್ಕಳ ಸುರಕ್ಷತೆಗೆ ಪೋಷಕರು ಹಾಗೂ ಸರ್ಕಾರ ಹೆಚ್ಚಿನ ಒತ್ತು ನೀಡಬೇಕು.

**■ ರಘುನಾಥ ಚ.ಹ.**



ಈಶ್ವರ್